ಆ) ಮಾಜಿ ಶಾಸಕರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಎಕ್ಸ್‌ಪ್ರೆಸ್ ವಾಹನಗಳಲ್ಲಿ ವರ್ಷದಲ್ಲಿ 12 ಬಾರಿ ಅವರು ವಾಸವಾಗಿರುವ ಸ್ಥಳದಿಂದ ಬೆಂಗಳೂರಿಗೆ ಮತ್ತು ವಾಪಸ್ಸು ಉಚಿತವಾಗಿ ಪ್ರಯಾಣ ಮಾಡಲು ಅವರಿಗೆ ನೀಡಲಾಗುವ ಮುದ್ರಿತ ಕೂಪನ್ನುಗಳ ಆಧಾರದ ಮೇಲೆ ಸೌಲಭ್ಯವನ್ನು ಕಲ್ಪಿಸಿಕೊಡಲಾಗಿದೆ.

ಮಾಜಿ ಶಾಸಕರುಗಳಿಗೆ ಕಲ್ಪಿಸಲಾಗಿರುವ ಉಚಿತ ಪ್ರಯಾಣಕ್ಕೆ ಆಗುವ ವೆಚ್ಚವನ್ನು ಪ್ರತಿ ವರ್ಷ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಮರುಪಾವತಿ ಮಾಡಲಾಗುತ್ತಿದೆ.

**ಹುಕ್ಕೇರಿ ಪಟ್ಟಣದಲ್ಲಿ ರಾಜ್ಯ ರಸ್ತೆ ಸಾರಿಗೆಯ ಬಸ್ ಡಿಪೋ ನಿರ್ಮಾಣ**

968 - ಶ್ರೀ ಉಮೇಶ ವಿ.ಕತ್ತಿ (ಹುಕ್ಕೇರಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹುಕ್ಕೇರಿ ಪಟ್ಟಣದಲ್ಲಿ ರಾಜ್ಯ ರಸ್ತೆ ಸಾರಿಗೆಯ ಬಸ್ಸು ಡಿಪೋ ಒಂದನ್ನು ನಿರ್ಮಿಸುವ ವಿಚಾರವು ಸರ್ಕಾರದ ಗಮನದಲ್ಲಿದೆಯೇ?*

*ಆ) ಹಾಗಿದ್ದರೆ ಈ ವರ್ಷ ನಿರ್ಮಿಸಲಾಗುವುದೆ?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

**ಬೆಲ್ಲದ ಬಾಗೇವಾಡಿ ಗ್ರಾಮಕ್ಕೆ ಬಸ್ ಸ್ಟಾಂಡ್ ನಿರ್ಮಾಣ**

969 - ಶ್ರೀ ಉಮೇಶ ವಿ. ಕತ್ತಿ (ಹುಕ್ಕೇರಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಹುಕ್ಕೇರಿ ಕ್ಷೇತದ ಬೆಲ್ಲದ ಬಾಗೇವಾಡಿ ಗ್ರಾಮಕ್ಕೆ ಬಸ್ಸು ನಿಲ್ದಾಣವು ಮಂಜೂರಾಗಿದೆಯೇ?*

*ಆ) ಹಾಗಿದ್ದಲ್ಲಿ, ಯಾವ ವರ್ಷದಲ್ಲಿ ಮಂಜೂರು ಮಾಡಲಾಗಿದೆ.*

*ಇ) ನಿಲ್ದಾಣಕ್ಕಾಗಿ ಗ್ರಾಮದವರನ್ನು ಸ್ಥಳವನ್ನು ಒದಗಿಸಿದ್ದಾರೆಯೇ, ಒದಗಿಸಲಾಗಿದ್ದರೆ ಯಾವಾಗ*

*ಈ) ಬಸ್ ನಿಲ್ದಾಣದ ಕಟ್ಟಡವನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು) :

ಅ) ಇಲ್ಲಾ.

ಆ) ಉದ್ಭವಿಸುವುದಿಲ್ಲ.

ಇ) ಇಲ್ಲಾ.

ಈ) ಬೇಕಾಗುವ ಭೂಮಿಯನ್ನು ಒದಗಿಸಿದ ನಂತರ ಪರಿಶೀಲಿಸಲಾಗುವುದು.

**ಆಲೂರಿನಲ್ಲಿ ಬಸ್ ನಿಲ್ದಾಣ ನಿರ್ಮಿಸುವ ಬಗ್ಗೆ**

989 - ಶ್ರೀ ಬಿ.ಆರ್. ಗುರುದೇವ – (ಸಕಲೇಶಪುರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?